ದಿನಾಂಕಃ 25-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು ಃ ವಾದಿ ಪರ ಶ್ರೀ ಎಂ ಜೆ ಎಸ್ ವಕೀಲರಿಂದ

26. ದಾವಾ ಪೂರ್ವದಲ್ಲಿ ವಾದಿಯರು ಪ್ರತಿವಾದಿ 1 ರಿಂದ 3 ರವರಿಗೆ ಕೊಟ್ಟಂತಹ ಕಲಂ 80(1)ರ ನೋಟೀಸಿನ ಪ್ರತಿಯನ್ನು ನಾನು ನೋಡಿರುತ್ತೇನೆ. ನಾನು ಕಡತ ಪರಿಶೀಲಿಸುವಾಗ ಆ ನೋಟೀಸನ್ನು ನೋಡಿರುತ್ತೇನೆ. ಮೂರು ಜನಕ್ಕೆ ಜಾರಿಯಾದ ನೋಟೀಸನ್ನು ನಾನು ನೋಡಿರುತ್ತೇನೆ. ಪ್ರತಿವಾದಿ 1 ರಿಂದ 3 ರವರಿಗೆ ಜಾರಿಯಾದ ಕಲಂ 80(1) ನೋಟೀಸು ನಿಪಿ.11 ಎಂದು ಹಾಜರುಪಡಿಸಲಾಗಿರುತ್ತದೆ ಎಂದರೆ ಸಾಕ್ಷಿ ಸರಿ ಎಂದು ನುಡಿಯುತ್ತಾರೆ.

27. ನಿಪಿ.15 ರಿಂದ 17 ರ ದಾಖಲೆಗಳು ದಿನಾಂಕ 23-07-2013 ರಂದು ಜಾರಿಯಾದ ಬಗ್ಗೆ ಹಿಂಬರಹಗಳಾಗಿರುತ್ತವೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಿಪಿ.11 ರಂತೆ ನೋಟೀಸು ಹಾಗೂ ನಿಪಿ.15 ರಿಂದ 17 ರಂತೆ ನೋಟೀಸು ಜಾರಿಯಾದ ವಿಚಾರವನ್ನು ಹೇಳಿದ ಬಗ್ಗೆ ನನಗೆ ಈಗ ನೆನಪಾಗುತ್ತಿಲ್ಲ ಎಂದು ನುಡಿದು, ಸಾಕ್ಷಿ ಸಾಕ್ಷ್ಯ ಪ್ರಮಾಣ ಪತ್ರವನ್ನು ನೋಡಿ ಆ ರೀತಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಪ್ರಮಾಣ ಪತ್ರ ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿ 1 ರಿಂದ 3 ರವರಿಗೆ ನಿಪಿ.11 ರಂತೆ ನೋಟೀಸು ಜಾರಿಯಾದ ಬಗ್ಗೆ ಮಾಹಿತಿ ಇತ್ತು ಎಂದರೆ ಸರಿ.

28. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ 1 ರಿಂದ 3 ನೇ ಪ್ರತಿವಾದಿಯರಿಗೆ ವಾದಿ ಯಾವುದೇ ನೋಟೀಸು ಕೊಟ್ಟಿರುವುದಿಲ್ಲ ಎಂದು ಹೇಳಿರುವುದಿಲ್ಲ, ನೋಟೀಸಿನಲ್ಲಿ ಇರುವ ವಿಚಾರಗಳು ಸುಳ್ಳು ಇರುತ್ತದೆ ಎಂದು ಮಾತ್ರ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ವಾದಿಯರಿಗೆ ತೊಂದರೆ ಕೊಡುವ ಮುಖ್ಯ ಉದ್ದೇಶದಿಂದ ನಾನು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸುಳ್ಳು ಸಾಧನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

29. ಈ ಪ್ರಕರಣದ ದಾವಾ ಬಿ ಶೆಡ್ಯೂಲ್ ಸ್ವತ್ತಿಗೆ ಸಂಬಂದಪಟ್ಟಂತೆ ಅಸಲು ದಾವೆ 356/1995 ರಂತೆ ದಾವಾ ದಾಖಲಾದ ಬಗ್ಗೆ ನನಗೆ ಗೊತ್ತಿರುತ್ತದೆ. ನನಗೆ ಸರಕಾರಿ ವಕೀಲರು ಈ ರೀತಿ ಮಾಹಿತಿ ಕೊಟ್ಟಿರುತ್ತಾರೆ. ಅವರು ದಾಖಲೆಯನ್ನು ಸಹ ನನಗೆ ತೋರಿಸಿರುತ್ತಾರೆ. ನನಗೆ ಅಸಲು ದಾವೆ 356/1995 ರ ತೀರ್ಪು ಹಾಗೂ ಡಿಕ್ರಿಯ ಪ್ರತಿಯನ್ನು ತೋರಿಸಿರುತ್ತಾರೆ. ಅಸಲು ದಾವೆ 356/1995 ರಲ್ಲಿ ಸರ್ವೆ ನಂಬ್ರ 172/1 ಎ ಯ 62 ಸೆಂಟ್ಸ್‌ಗೆ ಸಂಬಂದಪಟ್ಟಂತೆ

ದಾವಾ ದಾಖಲಾಗಿತ್ತು ಎಂದು ನುಡಿಯುತ್ತಾರೆ. ಅಸಲು ದಾವೆ 356/1995 ರಲ್ಲಿ ಸರ್ವೆ ನಂಬ್ರ 172/1 ಎ ರ ಚತುರ್ಗಡಿಯನ್ನು ಏನೆಂದು ವಿವರಿಸಿರುತ್ತಾರೆ ಎಂದು ಗೊತ್ತಿರುವುದಿಲ್ಲ. ನರಸಿಂಹ ಮಧ್ಯಸ್ಥ ಹಾಗೂ ಜನಾರ್ದನ ಮಧ್ಯಸ್ಥ ರವರ ಬಿ ಶೆಡ್ಯೊಲ್ ಆಸ್ತಿಗೆ ತಾಗಿ ಖದೀಂ ಪಟ್ಟ ಇತ್ತು ಎಂದು ಹೇಳಿ ಅಸಲು ದಾವೆ 356/1995 ರಂತೆ ದಾವೆ ಸಲ್ಲಿಸಿರುತ್ತಾರೆ.

30. ನನ್ನ ಪ್ರಕಾರ ಸದರಿ ನರಸಿಂಹ ಮಧ್ಯಸ್ಥ ಹಾಗೂ ಜನಾರ್ಧನ ಮಧ್ಯಸ್ಥ ರವರ ಖದೀಂ ಪಟ್ಟ ಬಿ ಶೆಡ್ಯೂಲ್ ಗೆ ತಾಗಿ ಇತ್ತು, ಆದರೆ ಯಾವ ಕಡೆ ಎಂದು ನನಗೆ ಈಗ ಹೇಳಲು ಬರುವುದಿಲ್ಲ. ನನ್ನ ಪ್ರಕಾರ ಬಿ ಶೆಡ್ಯೂಲ್ ಸ್ವತ್ತು ನರಸಿಂಹ ಮಧ್ಯಸ್ಥ ಹಾಗೂ ಜನಾರ್ಧನ ಮಧ್ಯಸ್ಥ ರವರ 90 ಮೀಟರ್ ನ ಕುಮ್ಕಿ ಸ್ಥಳವಾಗಿತ್ತು. ಎಷ್ಟು ವಿಸ್ತೀರ್ಣ ಎಂದು ನನಗೆ ಗೊತ್ತಿರುವುದಿಲ್ಲ, ಆದರೆ 90 ಮೀಟರ್ ಕುಮ್ಕಿ ಹಕ್ಕು ಇತ್ತು. ನರಸಿಂಹ ಮಧ್ಯಸ್ಥ ಹಾಗೂ ಜನಾರ್ಧನ ಮಧ್ಯಸ್ಥ ರವರ ಕುಮ್ಕಿ ಸ್ಥಳದ ಖದೀಂ ಪಟ್ಟದ ಸರ್ವೆ ನಂಬ್ರ ಯಾವುದು ಎಂದು ನಾನು ತಿಳಿದುಕೊಂಡಿರುವುದಿಲ್ಲ. ದಾವಾ ಬಿ ಶೆಡ್ಯೂಲ್ ಗೆ ಸಂಬಂದಪಟ್ಟಂತೆ ನಿಪಿ.13 ಮತ್ತು 14 ರ ಸರ್ವೆ ಸ್ಕೆಚ್ಚನ್ನು ಹಾಜರುಪಡಿಸಿರುತ್ತೇನೆ.

31. ನಿಪಿ.13 ಮತ್ತು 14 ರ ಪ್ರಕಾರ ಸರ್ವೆ ನಂಬ್ರ 172/1 ಎ ರ ಬಾಜುವಿನಲ್ಲಿ ದಾವಾ ಎ ಶೆಡ್ಯೂಲ್ ಆಸ್ತಿ ಹೊರತುಪಡಿಸಿ ಬೇರೆ ಯಾವುದೇ ಖದೀಂ ಪಟ್ಟಗಳ ಸರ್ವೆ ನಂಬ್ರಗಳು ಇರುವ ಬಗ್ಗೆ ಕಂಡು ಬರುವುದಿಲ್ಲ ಎಂದರೆ ಸಾಕ್ಷಿ ನನಗೆ ತಾಂತ್ರಿಕವಾಗಿ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ.13 ಮತ್ತು 14 ಕಂದಾಯ ಸರ್ವೆ ದಾಖಲೆಗಳು ಇರುತ್ತವೆ. ಸದರಿ ದಾಖಲೆಗಳ ಬಗ್ಗೆ ತಾಂತ್ರಿಕವಾಗಿ ಮಾಹಿತಿ ಹೇಳಲು ಬರುವುದಿಲ್ಲ. ನನ್ನ ಪ್ರಕಾರ ಸದರಿ ದಾಖಲೆಗಳ ಮಾಹಿತಿಯನ್ನು ಸರ್ವೆಯವರಿಂದ ತಿಳಿದುಕೊಳ್ಳಬೇಕಾಗಿರುತ್ತದೆ ಎಂದು ನುಡಿಯುತ್ತಾರೆ. ಯಾವ ಕಾರಣಕ್ಕಾಗಿ ಆ ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ ಎಂದು ನನಗೆ ಗೊತ್ತಿರುವುದಿಲ್ಲ.

32. ಸರ್ವೆ ನಂಬ್ರ 172/1 ಎ ರ ಆಜುಬಾಜುವಿನಲ್ಲಿ ನರಸಿಂಹ ಮಧ್ಯಸ್ಥ ಹಾಗೂ ಜನಾರ್ಧನ ಮಧ್ಯಸ್ಥ ರವರ ಯಾವುದೇ ಸರ್ವೆ ನಂಬ್ರಗಳು ಕಂಡು ಬಾರದೇ ಇದ್ದರೂ ಸಹ ಸತ್ಯ ಹೇಳಬೇಕಾಗುತ್ತದೆ ಎಂಬ ಕಾರಣದಿಂದ ಸದರಿ ದಾಖಲೆಯ ಬಗ್ಗೆ ತಾಂತ್ರಿಕವಾಗಿ ನನಗೆ ಗೊತ್ತಾಗುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವೆ 356/1995 ರ ಪಕ್ಷಗಾರರಾದ ನರಸಿಂಹ ಮಧ್ಯಸ್ಥ ಹಾಗೂ ಜನಾರ್ಧನ ಮಧ್ಯಸ್ಥ ರವರ ಬಾಬ್ತಿನ ಆಸ್ತಿಗಳು ಈ ಪ್ರಕರಣದ ದಾವಾ ಎ ಮತ್ತು ಬಿ ಶೆಡ್ಯೂಲ್ ಆಸ್ತಿಯಿಂದ 500 ಮೀಟರ್ ದೂರದಲ್ಲಿ ಪಶ್ಚಿಮದ

ಉತ್ತರ ದಿಕ್ಕಿನಲ್ಲಿ ಇರುತ್ತದೆ ಎಂದರೆ ಸಾಕ್ಷಿ ಯಾವ ದಿಕ್ಕಿನಲ್ಲಿ ಇರುತ್ತದೆ ಎಂದು ಗೊತ್ತಿರುವುದಿಲ್ಲ, ಆದರೆ ದಾವಾ ಆಸ್ತಿ ನರಸಿಂಹ ಮಧ್ಯಸ್ಥ ಹಾಗೂ ಜನಾರ್ಧನ ಮಧ್ಯಸ್ಥ ರವರ ಖದೀಂ ಆಸ್ತಿಗೆ ತಾಗಿ ಇರುತ್ತದೆ ಎಂದು ನುಡಿಯುತ್ತಾರೆ .

33. ಅಸಲು ದಾವೆ 356/1995 ರ ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಆ ದಾಖಲೆಗಳನ್ನು ಯಾಕೆ ಹಾಜರು ಪಡಿಸಿರುವುದಿಲ್ಲ ಎಂದು ನನಗೆ ಗೊತ್ತಿರುವುದಿಲ್ಲ. ಅಸಲು ದಾವೆ 356/1995 ರ ದಾಖಲೆಗಳು ಹಾಗೂಾ ಮೇಲ್ಮನವಿ ದಾಖಲೆಗಳನ್ನು ಹಾಜರುಪಡಿಸಿದರೆ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರ ಸುಳ್ಳು ಎಂದು ಕಂಡು ಬರುವ ಕಾರಣ ಆ ದಾಖಲೆಗಳನ್ನು ಹಾಜರುಪಡಿಸುತ್ತಿಲ್ಲ ಎಂದರೆ ಸರಿಯಲ್ಲ. ಸರಕಾರಿ ವಕೀಲರು ಆ ದಾಖಲೆಗಳನ್ನು ಯಾವ ರೀತಿ ತೆಗೆದುಕೊಂಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ನಾವು ಆ ರೀತಿಯ ದಾಖಲೆಗಳನ್ನು ಪರಿಶೀಲಿಸದೇ ರಿಯಲ್ ಎಸ್ಟೇಟ್ ಉದ್ಯಮಿಗಳು ಕೊಟ್ಟಂತಹ ಮಾಹಿತಿ ಆಧಾರದ ಮೇಲೆ ಆ ರೀತಿ ದಾಖಲೆ ಇದೆ ಎಂದು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ.

34. ಈ ಪ್ರಕರಣದ ದಾವಾ ಎ ಮತ್ತು ಬಿ ಶೆಡ್ಯೂಲ್ ಗೂ ಹಾಗೂ ಅಸಲು ದಾವೆ 356/1995 ರ ದಾವಾ ಸ್ವತ್ತುಗಳಿಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 3 ರವರುಗಳು ಅಸಲು ದಾವೆ 356/1995 ರ ಬಗ್ಗೆ ತಮ್ಮ ತಕರಾರು ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂದಪಟ್ಟಂತೆ ವಾದಿಗಳು ನಿಪಿ.10 ರಂತೆ ಆರ್ ಟಿ ಸಿ ಹಾಜರುಪಡಿಸಿದ ಬಗ್ಗೆ ನನಗೆ ಗೊತ್ತಿರುತ್ತದೆ. ಸರ್ವೆ ನಂಬ್ರ 172/1 ಎ ಯ ಭಾಗಾಂಶ ಅಕ್ರಮ ಸಕ್ರಮ ಆದೇಶದಂತೆ ಶಿವರಾಮ ಕಾರಂತ ಎಂಬುವವರಿಗೆ ಮಂಜೂರಾದ ಬಗ್ಗೆ ನನಗೆ ಗೊತ್ತಿರುವುದಿಲ್ಲ.

35. ನಿಪಿ.10 ರಲ್ಲಿ ಮಂಜೂರಾದ ಬಗ್ಗೆ ಕಂಡು ಬರುತ್ತದೆ ಎಂದರೆ ಸರಿ. ಮಂಜಾರಾದ ಆಸ್ತಿಯ ಬಗ್ಗೆ ತಮ್ಮ ಯಾವುದಾದರೂ ಆಕ್ಷೇಪ ಇದೆಯಾ ಎಂದರೆ ಸಾಕ್ಷಿ ನಾನು ಕಡತವನ್ನು ನೋಡಿರುವುದಿಲ್ಲ, ಆ ಬಗ್ಗೆ ನನಗೆ ಈಗ ಏನೂ ಹೇಳಲು ಸಾಧ್ಯವಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಶಿವರಾಮ ಕಾರಂತವರಿಗೆ ಮಂಜೂರಾದ ಜಾಗ ಈ ಪ್ರಕರಣದ ಬಿ ಶೆಡ್ಯೂಲ್ ಆಸ್ತಿಯಿಂದ ಸುಮಾರು 200 ಮೀಟರ್ ಪಶ್ಚಿಮಕ್ಕೆ ಇರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಶಿವರಾಮ ಕಾರಂತ ರವರಿಗೆ ನಿಪಿ.11 ರ ಪ್ರಕಾರ ಕಲಂ.10 ರಲ್ಲಿ ಇರುವ ಆದೇಶ ನಮ್ಮ ಕಛೇರಿಯ ಆದೇಶವಾಗಿರುತ್ತದೆ ಎಂದರೆ ಸರಿ.

36. ದಾವಾ ಬಿ ಶೆಡ್ಯೂಲ್ ಸ್ವತ್ತನ್ನು ವಾದಿಯರಿಗೆ ಮಂಜೂರೂ ಮಾಡಲು ಯಾವುದೇ ಕಾನೂನಿನ ಅಡಚಣೆ ಇಲ್ಲದೇ ಇದ್ದರೂ ಸಹ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಮಾಹಿತಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ವಾದಿ ಸಲ್ಲಿಸಿದ ನಮೂನೆ-53 ರ ಅರ್ಜಿ ಈ ದಾವಾ ಇತ್ಯರ್ಥಕ್ಕೆ ಇರುವುದರಿಂದ ಅದನ್ನು ಹಾಗೇ ಇರಿಸಲಾಗಿರುತ್ತದೆ.

ಈ ಸಂದರ್ಭದಲ್ಲಿ ನ್ಯಾಯಾಲಯದ ಬೆಳಗ್ಗಿನ ಕಲಾಪ ಮುಕ್ತಾಯವಾದ ಕಾರಣ ಪ್ರಕರಣವನ್ನು ಮಧ್ಯಾಹ್ನ 2.45 ಕ್ಕೆ ತೆಗೆದುಕೊಳ್ಳಲು ಮುಂದೂಡಲಾಯಿತು.

ಮುಂದುವರಿದ ಪಾಟೀ ಸವಾಲು ಃ ವಾದಿ ಪರ ಶ್ರೀ ಎಂ ಜೆ ಎಸ್ ವಕೀಲರಿಂದ

37. ಸಾಕ್ಷಿಗೆ ಈಗ ಒಟ್ಟು 15 ಫೋಟೋಗಳನ್ನು ತೋರಿಸಿದ್ದು, ಸದರಿ ಫೋಟೋಗಳು ಬಿ ಶೆಡ್ಯೂಲ್ ಸ್ವತ್ತಿನ ಫೋಟೋಗಳಾ ಎಂದು ಕೇಳಿದ್ದು ಸಾಕ್ಷಿ ಸದರಿ 15 ಫೋಟೋಗಳನ್ನು ನೋಡಿ ಅವುಗಳು ದಾವಾ ಎ ಶೆಡ್ಯೂಲ್ ಗೆ ಸಂಬಂದಪಟ್ಟಿರುತ್ತವೆ ಎಂದು ನುಡಿದಿದ್ದರಿಂದ ಅವುಗಳನ್ನು ನಿಪಿ.18 ರಿಂದ 32 ಎಂದು ಗುರುತಿಸಲಾಯಿತು. ಅದಕ್ಕೆ ಸಂಬಂದಪಟ್ಟ ಸಿ.ಡಿ ಯನ್ನು ನಿಪಿ.33 ಎಂದು ಗುರುತಿಸಲಾಯಿತು. ನಿಪಿ.18 ರಿಂದ 32ರ ಫೋಟೋಗಳು ಬಿ ಶೆಡ್ಯೂಲ್ ಗೆ ಸಂಬಂದಪಟ್ಟಿರುತ್ತವೆ ಎಂದರೆ ಸರಿಯಲ್ಲ.

38. ನಿಡಿ.9 ರ ಅರ್ಜಿಗೆ ಸಂಬಂದಪಟ್ಟಂತೆ ನಿಡಿ.10 ರಂತೆ ಕಂದಾಯ ಅಧಿಕಾರಿಗಳು ತನಿಖೆ ನಡೆಸಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಡಿ.10 ರಲ್ಲಿ ಕಂಡು ಬರುವ ವಿಚಾರಗಳು ನನ್ನ ಪ್ರಕಾರ ಸರಿ ಇರುತ್ತವೆ. ನಿಡಿ.9 ರ ಅರ್ಜಿಗೆ ಸಂಬಂದಪಟ್ಟಂತೆ ದಾವಾ ಬಿ ಶೆಡ್ಯೂಲ್ ಸ್ವತ್ತು ಅಳತೆ ಆಗಿರುತ್ತದೆ ಎಂದರೆ ಸರಿ. ನಿಡಿ.9 ರ ಅರ್ಜಿಗೆ ಸಂಬಂದಪಟ್ಟಂತೆ ಮಾಡಲಾದ ಅಳತೆಯ ದಾಖಲೆಯನ್ನು ನಿಡಿ.11 ರಲ್ಲಿ ಹಾಜರುಪಡಿಸಿರುತ್ತೇನೆ. ಅರ್ಜಿಗೆ ಸಂಬಂದಪಟ್ಟಂತಹ ಅಳತೆಯ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ನಿಡಿ.11 ರಂತೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

39. ನಿಡಿ.9 ರ ಅರ್ಜಿಯನ್ನು ಎನ್ ಸಿ ಆರ್ 7-20/99-00 ರಂತೆ ತನಿಖೆಗೆ ಒಳಪಡಿಸಲಾಗಿದೆ. ನಿಡಿ.11, ಅರ್ಜಿದಾರರ ನಿಡಿ.9 ರ ಅರ್ಜಿಗೆ ಸಂಬಂದಪಟ್ಟ ದಾಖಲೆ ಅಲ್ಲ ಎಂದರೆ ಸರಿಯಲ್ಲ. ನಿಡಿ.11 ರಲ್ಲಿ ಅರ್ಜಿದಾರರ ಆಸ್ತಿಯನ್ನು ಗುರುತಿಸಲಾಗಿರುತ್ತದೆ. ಸಾಕ್ಷಿ ದಾಖಲೆ ನೋಡಿ ಪಿ.1

ಎಂದು ಹಳದಿ ಬಣ್ಣದಲ್ಲಿ ನಮೂದಿಸಿದ ಭಾಗವನ್ನು ನೋಡಿ ಗುರುತಿಸಿರುತ್ತಾರೆ. ನಿಡಿ.11 ರ ದಾಖಲೆಯಲ್ಲಿ ಪಿ.1 ಎಂದು ನಮೂದಿಸಿರುವ ಭಾಗ ವಾದಿಗಳು ಆಕ್ರಮಿಸಿರುವ ಸರಕಾರಿ ಜಾಗವಾಗಿರುತ್ತದೆ ಎಂದು ನುಡಿಯುತ್ತಾರೆ.

40. ನಾನು ಸ್ಥಳ ತನಿಖೆಗೆ ಹೋದಾಗ ನಿಡಿ.10 ರ ದಾಖಲೆಯನ್ನು ಸ್ಥಳಕ್ಕೆ ತೆಗೆದುಕೊಂಡು ಹೋಗಿದ್ದೆ. ನಾನು ಸ್ಥಳ ತನಿಖೆ ಮಾಡುವಾಗ ನಿಡಿ.10 ರ ವಿಚಾರಗಳು ಸತ್ಯವಿರುತ್ತದೆ ಎಂದು ಕಂಡು ಬಂದಿರುತ್ತದೆ. ದಾವಾ ಬಿ ಶೆಡ್ಯೂಲ್, ವಾದಿ ಹಾಗೂ ಅವರ ಕುಟುಂಬದವರು ಆಕ್ರಮಿಸಿ ಕೃಷಿ ಮಾಡುತ್ತಿರುವ ಜಾಗ ಎಂದರೆ ಸರಿಯಲ್ಲ. ಬಿ ಶೆಡ್ಯೂಲ್ ಆಸ್ತಿ ಹಾಗೂ ಎ ಶೆಡ್ಯೂಲ್ ಆಸ್ತಿಯಲ್ಲಿ ಕೆಲವು ರಿಯಲ್ ಎಸ್ಟೇಟ್ ಏಜೆಂಟರು ರಸ್ತೆ ಮಾಡಲು ಪ್ರಯತ್ನಿಸಿರುತ್ತಾರೆ ಎಂದರೆ ಸರಿಯಲ್ಲ. ಅವರ ಕೃತ್ಯಕ್ಕೆ 2 ರಿಂದ 4 ನೇ ಪ್ರತಿವಾದಿಗಳು ಸಹಾಯ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ.

41. ದಾವಾ ಬಿ ಶೆಡ್ಯೂಲ್ ಸ್ವತ್ತು ವಾದಿ ಹಾಗೂ ಅವರ ಕುಟುಂಬದವರ ಸ್ವಂತ ಸ್ವಾಧೀನದಲ್ಲಿ ಇರುವರಿಂದ ಪ್ರತಿವಾದಿ 1 ರಿಂದ 4 ರವರು ಅವರ ಸ್ವಾಧೀನಕ್ಕೆ ದಕ್ಕೆ ಉಂಟು ಮಾಡುವ ಹಕ್ಕು ಇರುವುದಿಲ್ಲ ಎಂದರೆ ಅವರು ಯಾವುದೇ ಸ್ವಾಧೀನದಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ನಿಡಿ.1 ರಿಂದ 6 ರ ದಾಖಲೆಗಳನ್ನು ತೋರಿಸಿದ್ದು, ಸಾಕ್ಷಿ ಫೊಟೋಗಳನ್ನು ನೋಡಿ ಅದು ಯಾವ ಜಾಗ ಎಂದು ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ಕರ್ನಾಟಕ ಕಂದಾಯ ಕಾಯ್ದೆ ಪ್ರಕಾರ ಸ್ಥಳದ ವ್ಯಕ್ತಿಗಳಿಗೆ ನೋಟೀಸು ಕೊಡದೇ ಆ ಸ್ಥಳಕ್ಕೆ ಹೋಗಬಾರದು ಎಂದರೆ ಸರಿಯಲ್ಲ. ನಾನು ದಾವಾ ಸ್ಥಳಕ್ಕೆ ಯಾವತ್ತೂ ಹೋಗದೇ ಇರುವುದರಿಂದ ನಾನು ವಾದಿಗಳಿಗೆ ನೊಟೀಸು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

42. ವಾದಿಯರ ವಿರೋಧಿಗಳು ಹಾಗೂ ರಿಯಲ್ ಎಸ್ಟೇಟ್ ಏಜೆಂಟರ ಪ್ರಭಾವಕ್ಕೆ ಒಳಗಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಅಂದಾಜಿನಲ್ಲಿ ಮಾಹಿತಿ ಕೊಡುತ್ತಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಬಿ ಶೆಡ್ಯೂಲ್ ಸ್ವತ್ತು ಕಳೆದ 72 ವರ್ಷಗಳಿಂದಿನಿಂದಲೂ ವಾದಿಯರು ಹಾಗೂ ಅವರ ಹಿರಿಯ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ತೆಂಗಿನ ಮರಗಳು ಹಾಗೂ ಇತರ ಅಭಿವೃದ್ದಿಗಳು ಇರುತ್ತವೆ ಎಂದರೆ ಸರಿಯಲ್ಲ. ದಾವಾ ಸ್ಥಳದ ಸ್ಥಿತಿ

ಗತಿಗೆ ವಿರುದ್ಧವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದಲ್ಲಿ ಸಾಕ್ಷ್ಯ ಕೊಡಲು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದುರುದ್ದೇಶದಿಂದ ವಾದಿಯರ ವಿರುದ್ದ ಸುಳ್ಳು ಆಪಾದನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ